ಕರ್ನಾಟಕ ಸರ್ಕಾರ

ಸಾರ್ವಜನಿಕ ಶಿಕ್ಷಣ ಇಲಾಖೆ

ಆಯುಕ್ತರ ಕಛೇರಿ, ಹೊಸ ಸಾರ್ವಜನಿಕ ಕಛೇರಿಗಳು, ನೃಪತುಂಗ ರಸ್ತೆ, ಕೆ.ಆರ್.ವೃತ್ತ, ಬೆಂಗಳೂರು –1

ಸಂಖ್ಯೆ: ಎ.ಡಿ.ಎಂ2(2)ಪ್ರಾ.ಶಾ.ದಾ.–01/2016–17 ದಿನಾಂಕ : 07–06–2017

**ಜ್ಞಾಪನ**

**ವಿಷಯ:** ಪ್ರಾಥಮಿಕ ಶಾಲಾ ಒಂದನೇ ತರಗತಿಗೆ ಮಕ್ಕಳನ್ನು ದಾಖಲಾತಿ ಮಾಡಲು ವಯೋಮಿತಿಯನ್ನು ನಿರ್ಧರಿಸುವ ಬಗ್ಗೆ.

**ಉಲ್ಲೇಖ:** 1. ಎ.ಡಿ.ಎಂ2(2)ಪ್ರಾ.ಶಾ.ದಾ.–01/2016–17, ದಿನಾಂಕ : 18–01–2017.
2. ಎ.ಡಿ.ಎಂ2(2)ಪ್ರಾ.ಶಾ.ದಾ.–01/2016–17 ಭಾಗ–2ರ ಟಿಪ್ಪಣಿ ಆದೇಶ ದಿನಾಂಕ : 07–06–2017

*****

**ಪ್ರಸ್ತಾವನೆ**

ಪ್ರಾಥಮಿಕ ಶಾಲಾ 1 ನೇ ತರಗತಿಗೆ ಮಕ್ಕಳನ್ನು 2017–18ನೇ ಶೈಕ್ಷಣಿಕ ವರ್ಷದಲ್ಲಿ ದಾಖಲಾತಿ ಮಾಡಲು ಉಲ್ಲೇಖ–1 ರಲ್ಲಿ 5 ವರ್ಷ 10 ತಿಂಗಳು ನಿಗಧಿ ಮಾಡಲಾಗಿತ್ತು. 2017–18 ನೇ ಶೈಕ್ಷಣಿಕ ವರ್ಷದಲ್ಲಿ ಪೂರ್ವ ಪ್ರಾಥಮಿಕ ಶಿಕ್ಷಣದ ಎಲ್.ಕೆ.ಜಿ ತರಗತಿಗೆ ಪ್ರವೇಶಕ್ಕಾಗಿ 3 ವರ್ಷ 10 ತಿಂಗಳು ವಯೋಮಿತಿ ನಿಗಧಿಪಡಿಸಲಾಗಿತ್ತು. ಉಚಿತ ಮತ್ತು ಕಡ್ಡಾಯ ಶಿಕ್ಷಣಕ್ಕಾಗಿ ಮಕ್ಕಳ ಹಕ್ಕು ಕಾಯಿದೆ ಅನ್ವಯ ಪ್ರವೇಶದ ವಯೋಮಿತಿಯನ್ನು ಸಮಗೊಳಿಸಲು ಮೇಲ್ಕಾಣಿಸಿದ ವಯೋಮಿತಿ ನಿಗಧಿಪಡಿಸಲಾಗಿತ್ತು.

ಕಳೆದ ಶೈಕ್ಷಣಿಕ ವರ್ಷದವರೆಗೆ, ಸದರಿ ವಯೋಮಿತಿಯ ಮಾನದಂಡಕ್ಕೆ ತಾಳೆ ಆಗದಿರುವ ಎಲ್.ಕೆ.ಜಿ. ತರಗತಿ ಪ್ರವೇಶಕ್ಕೆ ಮೂರು ವರ್ಷ, 1ನೇ ತರಗತಿಗೆ 5 ವರ್ಷಕ್ಕೆ ಸ್ವಯಿಚ್ಛಾ ದಾಖಲಾತಿಗೆ ಅವಕಾಶ ಮಾಡಕೊಡಲಾಗಿತ್ತು.

ಉಚಿತ ಮತ್ತು ಕಡ್ಡಾಯ ಶಿಕ್ಷಣ ಹಕ್ಕು ಕಾಯಿದೆ ಅನ್ವಯ ವಯೋಮಿತಿ ಮಾನದಂಡವನ್ನು ಅನುಕ್ರಮವಾಗಿ (Gradually) ಬದಲಾಯಿಸಲು, ಉಲ್ಲೇಖ 1 ರ ದಿನಾಂಕ: 18.01.2017ರ ಮೇಲಿನ ಸುತ್ತೋಲೆಯನ್ನು ಮಾರ್ಪಡಿಸಿ ಈ ಕೆಳಕಾಣಿಸಿದ ಮಾನದಂಡ ನಿಗಧಿಪಡಿಸಲಾಗಿದೆ.

**ಆದೇಶ**

1. ನೇರವಾಗಿ 1 ನೇ ತರಗತಿಗೆ ಶೈಕ್ಷಣಿಕ ವರ್ಷ 2017–18ಕ್ಕೆ ಸರ್ಕಾರಿ, ಅನುದಾನಿತ, ಅನುದಾನರಹಿತ ಶಾಲೆಗಳಿಗೆ ಸೇರುವ ಮಕ್ಕಳಿಗೆ ದಿನಾಂಕ: 01.06.2017 ರಂದು 5 ವರ್ಷ 5 ತಿಂಗಳು ತುಂಬಿರಬೇಕು. ಅಂದರೆ ಮಗು ದಿನಾಂಕ: 01.01.2012ರ ಮುಂಚೆ ಜನಿಸಿರಬೇಕು.

2. 2015–16 ಹಾಗೂ 2016–17 ರಲ್ಲಿ ಎಲ್‌ಕೆಜಿಗೆ ದಾಖಲಾಗಿರುವ ಮಗು ಸ್ವಾಭಾವಿಕ ಬೆಳವಣಿಗೆ ಮೇರೆಗೆ 1 ನೇ ತರಗತಿಗೆ ದಾಖಲಾಗಬಹುದು. ಅವರಿಗೆ ಮೇಲಿನ ವಯೋಮಿತಿ ಅನ್ವಯಿಸುವುದಿಲ್ಲ.

3. 2017–18ನೇ ಶೈಕ್ಷಣಿಕ ವರ್ಷದಲ್ಲಿ ಎಲ್.ಕೆ.ಜಿ ಗೆ ಸೇರುವ ಮಕ್ಕಳ ಕನಿಷ್ಠ ವಯೋಮಿತಿ ದಿನಾಂಕ: 01.06.2017 ರಂದು ಮೂರು ವರ್ಷ 10 ತಿಂಗಳು ಆಗಿರಲೇಬೇಕು.

4. ಶೈಕ್ಷಣಿಕ ವರ್ಷ 2018–19ನೇ ಸಾಲಿನಿಂದ ಸರ್ಕಾರಿ, ಅನುದಾನಿತ, ಅನುದಾನರಹಿತ ಶಾಲೆಗಳಲ್ಲಿ 1 ನೇ ತರಗತಿಗೆ ನೇರವಾಗಿ ದಾಖಲಾಗುವ ಮಗುವು ಸಂಬಂಧಿಸಿದ ಶೈಕ್ಷಣಿಕ ವರ್ಷದ ಜೂನ್ 1 ರಂದು 5 ವರ್ಷ, 10 ತಿಂಗಳು ಪೂರ್ಣಗೊಂಡಿರಬೇಕು.

5. ಅದೇ ರೀತಿ 2018-19ನೇ ಸಾಲಿನಿಂದ ಎಲ್.ಕೆ.ಜಿ ತರಗತಿಗೆ ನೇರವಾಗಿ ದಾಖಲಾಗುವ ಮಕ್ಕಳು ಸಂಬಂಧಿಸಿದ ಶೈಕ್ಷಣಿಕ ವರ್ಷದ ಜೂನ್ 1 ರಂದು ಮೂರು ವರ್ಷ 10 ತಿಂಗಳು ಪೂರ್ಣಗೊಂಡಿರಬೇಕು.

6. ಉಳಿದಂತೆ ಉಲ್ಲೇಖ-1 ರ ಅಂಶಗಳು ಯಥಾ ಸ್ಥಿತಿ ಮುಂದುವರಿಯುತ್ತವೆ.

(ಸೌ...ಸ್ಯ, ಭಾ.ಆ.ಸೇ)
ಆಯುಕ್ತರು

**ಇವರಿಗೆ,**

1. ರಾಜ್ಯದ ಎಲ್ಲಾ ಜಿಲ್ಲಾ ಉಪನಿರ್ದೇಶಕರು(ಆಡಳಿತ) ಇವರ ಸೂಕ್ತ ಕ್ರಮಕ್ಕಾಗಿ,
2. ರಾಜ್ಯದ ಎಲ್ಲಾ ವಲಯ/ ತಾಲ್ಲೂಕು ಕ್ಷೇತ್ರ ಶಿಕ್ಷಣಾಧಿಕಾರಿಗಳು (ಉಪನಿರ್ದೇಶರುಗಳ ಮುಖಾಂತರ) ಇವರುಗಳಿಗೆ ಸೂಕ್ತ ಕ್ರಮಕ್ಕಾಗಿ.

**ಪ್ರತಿಯನ್ನು:**

1. ಸರ್ಕಾರದ ಅಪರ ಮುಖ್ಯ ಕಾರ್ಯದರ್ಶಿಗಳು, ಶಿಕ್ಷಣ ಇಲಾಖೆ (ಪ್ರಾಥಮಿಕ ಮತ್ತು ಪ್ರೌಢ ಶಿಕ್ಷಣ), ಬಹುಮಹಡಿ ಕಟ್ಟಡ, ಬೆಂಗಳೂರು.
2. ರಾಜ್ಯ ಯೋಜನಾ ನಿರ್ದೇಶಕರು, ಸರ್ವ ಶಿಕ್ಷಣ ಅಭಿಯಾನ, ಬೆಂಗಳೂರು ಇವರ ಮಾಹಿತಿಗಾಗಿ,
3. ಅಪರ ಆಯುಕ್ತರು, ಸಾರ್ವಜನಿಕ ಶಿಕ್ಷಣ ಇಲಾಖೆ, ಕಲಬುರ್ಗಿ/ ಧಾರವಾಡ ಇವರ ಮಾಹಿತಿಗಾಗಿ,
4. ನಿರ್ದೇಶಕರು(ಕಾರ್ಯಕ್ರಮಗಳು). ಸರ್ವ ಶಿಕ್ಷಣ ಅಭಿಯಾನ, ನಿರ್ದೇಶಕರು, ಆರ್.ಎಂ.ಎಸ್.ಎ., ಬೆಂಗಳೂರು ಇವರ ಮಾಹಿತಿಗಾಗಿ,
5. ನಿರ್ದೇಶಕರು, ಪ್ರಾಥಮಿಕ, ಪ್ರೌಢ/ಡಿ.ಎಸ್.ಇ.ಆರ್.ಟಿ./ಪ್ರೌಢ ಶಿಕ್ಷಣ ಪರೀಕ್ಷಾ ಮಂಡಳಿ/ ಅಲ್ಪ ಸಂಖ್ಯಾತ ಭಾಷಾ ಶಾಲೆಗಳ ನಿರ್ದೇಶನಾಲಯ, ಬೆಂಗಳೂರು ಇವರುಗಳ ಮಾಹಿತಿಗಾಗಿ,
6. ನಿರ್ದೇಶಕರು, ಅಪರ ಆಯುಕ್ತಾಲಯ, ಧಾರವಾಡ/ಕಲಬುರ್ಗಿ ಇವರ ಮಾಹಿತಿಗಾಗಿ,
7. ಇ-ಆಡಳಿತ ಶಾಖೆಗೆ ಇಲಾಖೆಯ ವೆಬ್‌ಸೈಟ್‌ನಲ್ಲಿ ಪ್ರಕಟಿಸುವುದಕ್ಕಾಗಿ,
8. ಕಛೇರಿ ಪ್ರತಿ.